**ಕರ್ನಾಟಕ ವಿಧಾನ ಪರಿಷತ್ತು**

**156ನೇ ಅಧಿವೇಶನ**

ಚುಕ್ಕೆ ರಹಿತ ಪ್ರಶ್ನೆಸಂಖ್ಯೆ : **336 (342)**

ಸದಸ್ಯರ ಹೆಸರು : **ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು)**

ಉತ್ತರಿಸುವ ದಿನಾಂಕ : **13-08-2025**

ಉತ್ತರಿಸುವ ಸಚಿವರು : **ಲೋಕೋಪಯೋಗಿ ಸಚಿವರು**

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಉತ್ತರಕರ್ನಾಟಕ ನಾಗರೀಕ ಗುತ್ತಿಗೆದಾರರ ಸಂಘವು ಲೋಕೋಪಯೋಗಿ ಇಲಾಖೆಯಲ್ಲಿ ಸುಮಾರು 4000 ಕೋಟಿ ರೂ.ಬಿಲ್ ಬಾಕಿ ಇದ್ದು, ಕೂಡಲೇ ಬಿಲ್ ಪಾವತಿ ಕುರಿತು ಕ್ರಮಕೈಗೊಳ್ಳದಿದ್ದಲ್ಲಿ ಲೋಕಾಯುಕ್ತರನ್ನು ಸಂಪರ್ಕಿಸಿ ಔಪಚಾರಿಕ ದೂರುಗಳನ್ನು ಸಲ್ಲಿಸಲಾಗುವುದು ಎಂದು ಮಾಧ್ಯಮಗಳಲ್ಲಿ ಹೇಳಿಕೆ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ) | ಬಂದಿದ್ದಲ್ಲಿ ಸದರಿ ಗುತ್ತಿಗೆದಾರರ ಮೊತ್ತ ಬಾಕಿ ಉಳಿಸಿಕೊಂಡಿರುವುದಕ್ಕೆ ಕಾರಣಗಳೇನು; ಈ ಗುತ್ತಿಗೆದಾರರ ಒಪ್ಪಂದದ ಕರಾರಿನಂತೆ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದಾರೆಯೇ; | ಗುತ್ತಿಗೆದಾರರು ಕರಾರಿನನ್ವಯ ಕಾಮಗಾರಿಗಳನ್ನು ಪೂರ್ಣಗೊಳಿಸಿದ ನಂತರವೇ ಬಿಲ್ಲುಗಳನ್ನು ಸಲ್ಲಿಸಲಾಗುತ್ತದೆ. ಸದರಿ ಬಿಲ್ಲುಗಳನ್ನು ನಿಯಮಾನುಸಾರ ಪಾವತಿಸಲು ಕ್ರಮವಹಿಸಲಾಗುತ್ತದೆ. ಲೋಕೋಪಯೋಗಿ ಇಲಾಖೆಯಲ್ಲಿ ಪ್ರಸುತ್ತ ರೂ.8304 ಕೋಟಿ ಮೊತ್ತದ ಬಿಲ್ಲುಗಳು ಪಾವತಿಗೆ ಬಾಕಿ ಇರುತ್ತವೆ. ಈ ಬಿಲ್ಲುಗಳ ತೀರುವಳಿಗೆ ಇದುವರೆವಿಗೂ ರೂ.3417.00ಕೋಟಿ ಬಿಡುಗಡೆ ಮಾಡಲಾಗಿರುತ್ತದೆ. ಬಾಕಿಬಿಲ್ಲುಗಳನ್ನು ಅನುದಾನ ಲಭ್ಯತೆ ಆಧರಿಸಿ ಹಂತ ಹಂತವಾಗಿ ತೀರುವಳಿ ಮಾಡಲಾಗುತ್ತದೆ. |
| ಇ) | ಪೂರ್ಣಗೊಳಿಸಿದ್ದಲ್ಲಿ ಇವರ ಬಾಕಿ ಬಿಲ್ಲುಗಳನ್ನು ಪಾವತಿಸಲು ಯಾವ ಕಾರಣಗಳಿಂದ ತಡೆಹಿಡಿಯಲಾಗಿದೆ; ಪೂರ್ಣಗೊಳಿಸದಿದ್ದಲ್ಲಿ ಕರಾರಿನ್ವಯ ಇವರ ವಿರುದ್ಧ ಕೈಗೊಂಡ ಕ್ರಮಗಳೇನು; | |
| ಈ) | ಇಲಾಖೆಯೊಂದಿಗೆ ಒಪ್ಪಂದ ಕರಾರು ಮಾಡಿಕೊಂಡು ಕಾಮಗಾರಿ ಪೂರ್ಣಗೊಳಿಸಿ ಬಿಲ್ ಪಾವತಿ ಬಾಕಿಗೆ ಇರುವ ಪ್ರಕರಣಗಳು ಎಷ್ಟು; ಈ ಗುತ್ತಿಗೆದಾರರ ಬಾಕಿ ಬಿಲ್ ಮೊತ್ತವನ್ನು ಯಾವಾಗ ಪಾವತಿಸಲಾಗುವುದು? | |

ಸಂ:ಲೋಇ/908/ಐಎಫ್ಎ/2025 (ಇ-ಕಛೇರಿ)

**ಸತೀಶ ಜಾರಕಿಹೊಳಿ**

(ಲೋಕೋಪಯೋಗಿ ಇಲಾಖೆ ಸಚಿವರು)